# ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ

## ರೂಪಣಾತ್ಮಕ ಮೌಲ್ಯಮಾಪನ – 1

## 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ

## ಸಾಧನಾ ಪರೀಕ್ಷೆ – 1

## ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ರೂಪಣಾತ್ಮಕ ಮೌಲ್ಯಮಾಪನ – 1

## 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ

## ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆಯ ನೀಲ ನಕಾಶೆ

**ಹಂತ : 1. ಉದ್ದಿಷ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಉದ್ದಿಷ್ಟಗಳು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಜ್ಞಾನ / ಸ್ಮರಣೆ | 30.00 | 06 | 06 |
| 2 | ಗ್ರಹಿಕೆ | 30.00 | 06 | 03 |
| 3 | ಅಭಿವ್ಯಕ್ತಿ | 30.00 | 06 | 03 |
| 4 | ಪ್ರಶಂಸೆ | 10.00 | 02 | 01 |
| | **ಒಟ್ಟು** | **100** | **20** | **13** |

**ಹಂತ : 2. ಪ್ರಶ್ನೆಗಳ ಸ್ವರೂಪವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಪ್ರಶ್ನೆಯ ಸ್ವರೂಪ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವಸ್ತುನಿಷ್ಠ | 15 | 03 | 03 |
| 2 | ಕಿರು ಉತ್ತರ – 1 | 15 | 03 | 03 |
| 3 | ಕಿರು ಉತ್ತರ – 2 | 70 | 14 | 07 |
| | **ಒಟ್ಟು** | **100** | **20** | **13** |

**ಹಂತ : 3. ಕ್ಲಿಷ್ಟತೆಯ ಮಟ್ಟವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ಕ್ಲಿಷ್ಟತೆಯ ಮಟ್ಟ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸುಲಭ | 30 | 06 | 06 |
| 2 | ಸಾಧಾರಣ | 50 | 10 | 05 |
| 3 | ಕಠಿಣ | 20 | 04 | 02 |
| | **ಒಟ್ಟು** | **100** | **20** | **13** |

**ಹಂತ : 4(ಎ). ಪಠ್ಯಾಂಶವನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

| ಕ್ರ.ಸಂ. | ವಿಷಯ | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | **ಗದ್ಯ ಒಟ್ಟು** | **35** | **07** | **04** |
| 2 | **ಪದ್ಯ ಒಟ್ಟು** | **35** | **07** | **04** |
| 3 | **ಪಠ್ಯಪೋಷಕ ಅಧ್ಯಯನ** | **05** | **01** | **01** |
| 4 | **ವ್ಯಾಕರಣಾಂಶಗಳು, ವಾಕ್ಯ ರಚನೆ ಒಟ್ಟು** | **25** | **05** | **04** |
| | **ಸಮಗ್ರ ಒಟ್ಟು** | **100** | **20** | **13** |

**ಹಂತ : 4(ಬಿ) ಪಠ್ಯಾಂಶಗಳನ್ನು ಆಧರಿಸಿ ಶೇಕಡವಾರು ಅಂಕ ಹಂಚಿಕೆ.**

## 1. ಗದ್ಯ ಭಾಗ

| ಕ್ರ.ಸಂ. | ಗದ್ಯ ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಶಬರಿ | 20 | 03 | **02** |
| 2 | ಲಂಡನ್ ನಗರ | 15 | 04 | **02** |
| | **ಗದ್ಯ ಒಟ್ಟು** | **35** | **07** | **04** |

## 2. ಪದ್ಯ ಭಾಗ

| ಕ್ರ.ಸಂ | ಪದ್ಯ ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಸಂಕಲ್ಪಗೀತೆ | 20 | 04 | 02 |
| 2 | ಹಕ್ಕಿ ಹಾರುತಿದೆ ನೋಡಿದಿರಾ | 15 | 03 | 02 |
| | **ಪದ್ಯ ಒಟ್ಟು** | **35** | **07** | **04** |

## 3. ಪಠ್ಯಪೋಷಕ ಅಧ್ಯಯನ

| ಕ್ರ.ಸಂ | ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ಉದಾತ್ತ ಚಿಂತನೆಗಳು | 05 | 01 | 01 |
| | **ಪಠ್ಯ ಪೋಷಕ ಅಧ್ಯಯನ ಒಟ್ಟು** | **05** | **01** | **01** |

## 4. ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ

| ಕ್ರ.ಸಂ. | ಪಾಠದ ಹೆಸರು | ಶೇಕಡವಾರು | ಅಂಕಗಳು | ಪ್ರಶ್ನೆಗಳು |
|---|---|---|---|---|
| 1 | ವ್ಯಾಕರಣಾಂಶಗಳು | 15 | 03 | 03 |
| 2 | ವಾಕ್ಯ ರಚನೆ | 10 | 02 | 01 |
| | **ಒಟ್ಟು** | **25** | **05** | **04** |

ಹಂತ : 5. ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ರೂಪಣಾತ್ಮಕ ಮೌಲ್ಯಮಾಪನ – 1

**10 ನೆಯ ತರಗತಿ ಪ್ರಥಮ ಭಾಷೆ ಕನ್ನಡ**

**ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆಯ ನೀಲ ನಕಾಶೆ**

| ಕ್ರ. ಸಂ. | ಪಾಠದ ಹೆಸರು | ಜ್ಞಾನ / ಸ್ಮರಣೆ | | ಗ್ರಹಿಕೆ | | | ಅಭಿವ್ಯಕ್ತಿ | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ | ಕಿ. ಉ. 1 | ಕಿ. ಉ. 1 | ಕಿ. ಉ. 2 | ದೀ ಉ. 1 | ಕಿ. ಉ. 2 | ದೀ ಉ. 1 | ದೀ ಉ. 2 | ಕಿ. ಉ. 1 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ ಉ. 2 | | | |
| 1 | ಶಬರಿ | ** | 1(1) | ** | ** | ** | 1(2) | ** | ** | ** | ** | 1(1) | 1(2) | ** | ** | ** | 3 | 2 |
| 2 | ಲಂಡನ್ ನಗರ | ** | ** | ** | 1(2) | ** | 1(2) | ** | ** | ** | ** | ** | 2(2) | ** | ** | ** | 4 | 2 |
| | **ಗದ್ಯ ಒಟ್ಟು** | ** | **1(1)** | ** | **1(2)** | ** | **2(2)** | ** | ** | ** | ** | **1(1)** | **3(2)** | ** | ** | ** | **7** | **4** |
| 1 | ಸಂಕಲ್ಪಗೀತೆ | ** | ** | ** | 1(2) | ** | ** | ** | ** | 1(2) | ** | ** | 2(2) | ** | ** | ** | 4 | 2 |
| 2 | ಹಕ್ಕಿ ಹಾರುತಿದೆ ನೋಡಿದಿರಾ | ** | 1(1) | ** | 1(2) | ** | ** | ** | ** | ** | ** | 1(1) | 1(2) | ** | ** | ** | 3 | 2 |
| | **ಪದ್ಯ ಒಟ್ಟು** | ** | **1(1)** | ** | **2(2)** | ** | ** | ** | ** | **1(2)** | ** | **1(1)** | **3(2)** | ** | ** | ** | **7** | **4** |
| 1 | ಉದಾತ್ತ ಚಿಂತನೆಗಳು | ** | 1(1) | ** | ** | ** | ** | ** | ** | ** | ** | 1(1) | ** | ** | ** | ** | 1 | 1 |
| | **ಪಠ್ಯಪೋಷಕ ಅಧ್ಯಯನ** | ** | **1(1)** | ** | ** | ** | ** | ** | ** | ** | ** | **1(1)** | ** | ** | ** | ** | **1** | **1** |
| 1 | ವಾಕ್ಯ ರಚನೆ | ** | ** | ** | ** | ** | 1(2) | ** | ** | ** | ** | ** | 1(2) | ** | ** | ** | 2 | 1 |
| 2 | ವ್ಯಾಕರಣಾಂಶಗಳು | 3(1) | ** | ** | ** | ** | ** | ** | ** | ** | 3(1) | ** | ** | ** | ** | ** | 3 | 3 |
| | **ಒಟ್ಟು** | **3(1)** | ** | ** | ** | ** | ** | ** | ** | ** | **3(1)** | ** | **1(2)** | ** | ** | ** | **5** | **4** |
| | **ಸಮಗ್ರ ಒಟ್ಟು** | **3(1)** | **3(1)** | ** | **3(2)** | ** | **3(2)** | ** | ** | **1(2)** | **3(1)** | **3(1)** | **7(2)** | ** | ** | | **20** | **13** |
| | | **06** | | **06** | | | **06** | | | **2** | **20** | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

## ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ರೂಪಣಾತ್ಮಕ ಮೌಲ್ಯಮಾಪನ – 1

### 10 ನೆಯ ತರಗತಿ ಪ್ರಥಮ ಭಾಷೆ ಕನ್ನಡ – ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆ

**ಸಮಯ : 1.00 ಗಂಟೆ** **ಗರಿಷ್ಠ ಅಂಕಗಳು : 20**

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **3*1=3**

**1.** ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ;
(ಎ) 10 (ಬಿ) 13
(ಸಿ) 25 (ಡಿ) 09

**2.** ಕನ್ನಡದ ಲೋಪ ಸಂಧಿಗೆ ಉದಾಹರಣೆಯಾದ ಪದವಿದು;
(ಎ) ಶಾಲೆಯಲ್ಲಿ (ಬಿ) ಮಗುವಿಗೆ
(ಸಿ) ಊರೂರು (ಡಿ) ತೇಜಗೆಡೆ

**3.** 'ಮರದತ್ತಣಿಂ' ಪದದಲ್ಲಿರುವ ವಿಭಕ್ತಿ ಪ್ರತ್ಯಯದ ಹೆಸರು;
(ಎ) ಚತುರ್ಥೀ (ಬಿ) ಪಂಚಮೀ
(ಸಿ) ಷಷ್ಠೀ (ಡಿ) ಸಪ್ತಮೀ

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** **3*1=3**

**4.** ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
**5.** ಹಕ್ಕಿಯು ಯಾವ ವೇಗದಲ್ಲಿ ಹಾರುತ್ತಿದೆ?
**6.** ಕ್ರಿಯಾ ಸ್ವಾತಂತ್ರ್ಯ ಎಂದರೇನು?

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.** **2*2=4**

**7.** ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?
**8.** ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ. 1*2=2**

**9.** ಪು. ತಿ. ನರಸಿಂಹಾಚಾರ್

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ.** **1*2=2**

**10.** * **ಮನಸ್ಸಿದ್ದರೆ ಮಾರ್ಗ**
* **ತಾಳಿದವನು ಬಾಳಿಯಾನು.**

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ.** **1*2=2**

**11.** "ಹೊತ್ತು ! ಹೊತ್ತು ! ಹೊತ್ತೇ ಹಣ !"

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*2=2**

**12.** ನೀಲಮೇಘ ಮಂಡಲ ______________________

______________________________

______________________________

_______________________ ______

ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ**

ಯುಗಯುಗಗಳ ______________________

______________________________

______________________________

_______________________ ______

ಹಕ್ಕಿ ಹಾರುತಿದೆ ನೋಡಿದಿರಾ?

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **1*2=2**

**13.** ಕಲಿಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ ॥

**ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ – ರೂಪಣಾತ್ಮಕ ಮೌಲ್ಯಮಾಪನ – 1**

**10 ನೆಯ ತರಗತಿ ಪ್ರಥಮ ಭಾಷೆ ಕನ್ನಡ – ಸಾಧನಾ ಪರೀಕ್ಷೆ – 1 – ಪ್ರಶ್ನೆ ಪತ್ರಿಕೆ**

**ಮೌಲ್ಯಮಾಪನ ಸೂಚಿ (ಮಾದರಿ ಉತ್ತರ ಪತ್ರಿಕೆ)**

**ಸಮಯ : 1.00 ಗಂಟೆ** **ಗರಿಷ್ಠ ಅಂಕಗಳು : 20**

**ಕೊಟ್ಟಿರುವ ಪ್ರತಿಪ್ರಶ್ನೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿಯುತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **3*1=3**

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ;
   (ಎ) 10 (ಬಿ) 13
   (ಸಿ) 25 (ಡಿ) 09 **ಉತ್ತರ : (ಎ) 10**
2. ಕನ್ನಡದ ಲೋಪ ಸಂಧಿಗೆ ಉದಾಹರಣೆಯಾದ ಪದವಿದು;
   (ಎ) ಶಾಲೆಯಲ್ಲಿ (ಬಿ) ಮಗುವಿಗೆ
   (ಸಿ) ಊರೂರು (ಡಿ) ತೇಜಗೆಡೆ **ಉತ್ತರ : (ಸಿ) ಊರೂರು**
3. 'ಮರದತ್ತಣಿಂ' ಪದದಲ್ಲಿರುವ ವಿಭಕ್ತಿ ಪ್ರತ್ಯಯದ ಹೆಸರು;
   (ಎ) ಚತುರ್ಥೀ (ಬಿ) ಪಂಚಮೀ
   (ಸಿ) ಷಷ್ಠೀ (ಡಿ) ಸಪ್ತಮೀ **ಉತ್ತರ : (ಬಿ) ಪಂಚಮೀ**

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ.** **3*1=3**

**(ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)**

4. **ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**
   ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.
5. **ಹಕ್ಕಿಯು ಯಾವ ವೇಗದಲ್ಲಿ ಹಾರುತ್ತಿದೆ?**
   ಹಕ್ಕಿಯು **ಎವೆ ತೆರೆದಿಕ್ಕುವ ಹೊತ್ತಿನೊಳಗೆ ಅಂದರೆ ಕಣ್ಣು ರೆಪ್ಪೆ ಮಿಟುಕಿಸುವಷ್ಟು ಸಮಯದಲ್ಲಿ (ನಿಮಿಷದಲ್ಲಿ) ಗಾವುದ ಗಾವುದ ಗಾವುದ ಮುಂದೆ** ಹಾರುತ್ತಿದೆ.
6. **ಕ್ರಿಯಾ ಸ್ವಾತಂತ್ರ್ಯ ಎಂದರೇನು?**
   ಕ್ರಿಯಾ ಸ್ವಾತಂತ್ರ್ಯವೆಂದರೆ ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು. ಅದು ಔಪಚಾರಿಕವಾಗಿದ್ದರೆ ಸಾಲದು ವಾಸ್ತವಿಕವಾಗಿ ಕೂಡ ಜಾರಿಯಲ್ಲಿರಬೇಕು.

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.** **2*2=4**

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

7. **ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?**
   ಲೇಖಕರು ಲಂಡನ್ ನಗರದಲ್ಲಿ ಹೆಣ್ಣುಮಕ್ಕಳು ಧರಿಸಿರುವ ಟೊಪ್ಪಿಗೆಯನ್ನು ಬಹುಕುತೂಹಲದಿಂದ ನೋಡುತ್ತಾರೆ. "ಒಂದು ಟೊಪ್ಪಿಗೆಯಂತೆ ಇನ್ನೊಂದು ಇರುವುದಿಲ್ಲ ಸಿಕ್ಕಿಸಿದ ಕುಚ್ಚವಾದರೂ ಕನಿಷ್ಠ ಪಕ್ಕಕ್ಕೆ ಬೇರೆಯಾಗಿರುತ್ತದೆ! ಕೋಟ್ಯಾವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ" ಎಂಬುದು ಲೇಖಕರ ಅಭಿಪ್ರಾಯವಾಗಿದೆ.
8. **ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು?**
   ಎಲ್ಲ ಮತಧರ್ಮಗಳು ದಾರಿ ತೋರಿಸುವ ದೀಪಗಳಾಗಿರುವುದರಿಂದ ಎಲ್ಲಾ ಮತಗಳನ್ನು ಪುರಸ್ಕರಿಸುವ ಎಚ್ಚರಿಕೆಯಲ್ಲಿ ನಾವು ಬದುಕಬೇಕು. ಭಯ ಮತ್ತು ಸಂಶಯಗಳಿಂದ ಮಸುಕಾಗಿರುವ ಮನದ ಕಣ್ಣಿನಲ್ಲಿ ಭವಿಷ್ಯದ ಕನಸನ್ನು ಬಿತ್ತುತ್ತ ಬದುಕು ನಡೆಸಬೇಕು.

**ಕೊಟ್ಟಿರುವ ಲೇಖಕರ / ಕವಿಗಳ ಕಾಲ, ಸ್ಥಳ ಮತ್ತು ಒಂದು ಕೃತಿಯನ್ನು ಕುರಿತು ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ. 1*2=2**

| | |
|---|---|
| **ಸ್ಥಳ, ಕಾಲ** | **1 ಅಂಕ** |
| **ಕೃತಿ, ಪ್ರಶಸ್ತಿ** | **1 ಅಂಕ** |
| **ಒಟ್ಟು** | **2 ಅಂಕಗಳು** |

9. **ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್**
**'ಪು.ತಿ.ನ.'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಶ್ರೀ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್** ಅವರು **ಕ್ರಿ. ಶ. 1905** ರಲ್ಲಿ ಮಂಡ್ಯ ಜಿಲ್ಲೆಯ **ಮೇಲುಕೋಟೆ**ಯಲ್ಲಿ ಜನಿಸಿದರು. ಕನ್ನಡ ನವೋದಯ ಕಾಲದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು **ಶಬರಿ,** ಅಹಲ್ಯೆ, ಗೋಕುಲ ನಿರ್ಗಮನ, ವಿಕಟಕವಿವಿಜಯ, ಹಂಸ ದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶ ದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ ಮೊದಲಾದ ಕೃತಿಗಳನ್ನೂ ರಚಿಸಿದ್ದಾರೆ. ಶ್ರೀಯುತರ **'ಶ್ರೀ ಹರಿಚರಿತೆ'** ಕೃತಿಗೆ ಕರ್ನಾಟಕ ಸರ್ಕಾರದಿಂದ **'ಪಂಪ ಪ್ರಶಸ್ತಿ'** ನೀಡಿ, ಗೌರವಿಸಲಾಗಿದೆ ಹಾಗೂ **'ಹಂಸ ದಮಯಂತಿ ಮತ್ತು ಇತರ ರೂಪಕಗಳು'** ಕೃತಿಗೆ **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ'ಯನ್ನು** ನೀಡಿ ಗೌರವಿಸಲಾಗಿದೆ. ಇವರಿಗೆ ಮೈಸೂರು ವಿಶ್ವವಿದ್ಯಾನಿಲಯವು ಗೌರವ ಡಿ. ಲಿಟ್. ಪದವಿಯನ್ನು ನೀಡಿ ಗೌರವಿಸಿದೆ.

**ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ ಬರೆಯಿರಿ. 1*2=2**

10. * **ಮನಸ್ಸಿದ್ದರೆ ಮಾರ್ಗ**
* **ತಾಳಿದವನು ಬಾಳಿಯಾನು.**

| | |
|---|---|
| **ಗಾದೆಯ ಮಹತ್ತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಒಟ್ಟು** | **2 ಅಂಕಗಳು** |

**ಕೊಟ್ಟಿರುವ ಪ್ರತಿಹೇಳಿಕೆಯನ್ನೂ ಸಂದರ್ಭದೊಡನೆ ವಿವರಿಸಿರಿ. 1*2=2**

| | |
|---|---|
| **ಆಯ್ಕೆ : ಕರ್ತೃ – ಆಕರ – ಪಾತ್ರ** | **1 ಅಂಕ** |
| **ಸಂದರ್ಭ : ಯಾರು – ಯಾರಿಗೆ – ಯಾವಾಗ** | **1 ಅಂಕ** |
| **ಒಟ್ಟು** | **2 ಅಂಕಗಳು** |

11. **"ಹೊತ್ತು ! ಹೊತ್ತು ! ಹೊತ್ತೇ ಹಣ"**
**ಆಯ್ಕೆ :–** ಈ ವಾಕ್ಯವನ್ನು ವಿ.ಕೃ. ಗೋಕಾಕ್ ಅವರು ರಚಿಸಿರುವ 'ಸಮುದ್ರದಾಚೆಯಿಂದ' ಎಂಬ ಪ್ರವಾಸಕಥನದಿಂದ ಆಯ್ದ 'ಲಂಡನ್ ನಗರ' ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ :–** ಲೇಖಕರು ಲಂಡನ್ ನಗರದಲ್ಲಿ ಲಕ್ಷಾನುಲಕ್ಷ ಜನರು ಸದಾ ಅವಸರದಿಂದ ಓಡಾಡುತ್ತಿರುವುದನ್ನು ಕಂಡ ಸಂದರ್ಭದಲ್ಲಿ "ವಿಲಾಯಿತಿಯ ಜನರಿಗೆ ಸಮಯವೇ ಹಣ; ಸಮಯವನ್ನು ವ್ಯರ್ಥಮಾಡದೆ ಸದಾ ಕಾರ್ಯಪ್ರವೃತ್ತರಾಗಿರುತ್ತಾರೆ" ಎಂದು ಹೇಳುತ್ತಾರೆ.
**ಸ್ವಾರಸ್ಯ :–** "ವಿಲಾಯಿತಿಯ ಜನರು ತಮ್ಮ ಸಮಯವನ್ನು ವ್ಯರ್ಥ ಮಾಡದೆ ದುಡಿದು ಹಣ ಗಳಿಸುವ ಧಾವಂತದಲ್ಲಿ ಇರುತ್ತಾರೆ; ಸಮಯವು ಹಣದಷ್ಟೇ ಮೌಲ್ಯಯುತವಾದುದು" ಎನ್ನುವುದನ್ನು ಲೇಖಕರು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಿದ್ದಾರೆ.

**ಕೊಟ್ಟಿರುವ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **1*2=2**

**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣ ಸಾಲಿಗೆ 1/2 ಅಂಕ)**

12. ನೀಲಮೇಘ ಮಂಡಲ – ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೂ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

ಅಥವಾ

ಯುಗ–ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**ಕೊಟ್ಟಿರುವ ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.** **1*2=2**

| | |
|---|---|
| **ಮೌಲ್ಯವನ್ನು ಗುರುತಿಸುವುದು** | **1. ಅಂಕ** |
| **ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ** | **1. ಅಂಕಗಳು** |
| **ಒಟ್ಟು** | **2. ಅಂಕಗಳು** |

13. ಕಲಿಷಿತವಾದೀ ನದೀಜಲಗಳಿಗೆ
ಮುಂಗಾರಿನ ಮಳೆಯಾಗೋಣ
ಬರಡಾಗಿರುವೀ ಕಾಡುಮೇಡುಗಳ
ವಸಂತವಾಗುತ ಮುಟ್ಟೋಣ ॥

ಈ ನೆಲದ ಕೆರೆ, ನದಿಗಳ ನೀರಿನಲ್ಲಿ ಅನೇಕ ರೀತಿಯ ಕೊಳಕು ತುಂಬಿಕೊಂಡು ಕಲುಷಿತಗೊಂಡಿದೆ. ಮಳೆಗಾಲ ಆರಂಭವಾಗಿ ಕೊಳಕಿನ ಹಳೆನೀರು ಕೊಚ್ಚಿ ಹೋಗಿ ಹೊಸನೀರು ತುಂಬುತ್ತದೆ. ಅಂಥ ಮುಂಗಾರು ಮಳೆಯಂತೆ ನಾವೂ ಸ್ವಚ್ಛತೆಗಾಗಿ ಕ್ರಿಯಾಶೀಲರಾಗೋಣ. ಬೆಟ್ಟ ಕಾಡುಗಳು ನಾಶವಾಗಲು, ಭೂಮಿ ಬರಡಾಗಲು ನಾವೇ ಕಾರಣರಾಗುತ್ತಿರುವ ಈ ಸಂದರ್ಭದಲ್ಲಿ ಪ್ರಕೃತಿಯಲ್ಲಿ ಮರಗಿಡಬಳ್ಳಿಗಳು ನವಚೈತನ್ಯವನ್ನು ಪಡೆಯಲು ವಸಂತ ಸಮೃದ್ಧಿಯನ್ನು ಮುಟ್ಟುವ ಸಂಕಲ್ಪ ತೊಡಬೇಕೆಂದು ಕವಿ ಆಶಿಸುತ್ತಾರೆ. ನಮ್ಮ ಪರಿಸರವನ್ನು ಶುದ್ಧವಾಗಿಟ್ಟು ಕೊಂಡು ಕಾಡುಮೇಡುಗಳನ್ನು ಸಮೃದ್ಧಗೊಳಿಸಬೇಕೆಂಬ ಮೌಲ್ಯಯುತ ಸಂದೇಶವನ್ನು ಪ್ರಸ್ತುತ ಪದ್ಯವು ತಿಳಿಸುತ್ತದೆ.

ಹಂತ : 8. ಪ್ರಶ್ನಾನುಸಾರ ವಿಶ್ಲೇಷಣೆ.

| ಪ್ರಶ್ನೆ ಸಂಖ್ಯೆ | ಘಟಕದ ಹೆಸರು | ಉದ್ದಿಷ್ಟ | ನಿರ್ದಿಷ್ಟ | ಪ್ರಶ್ನೆರೂಪ | ಅಂಕ | ಕಠಿಣತೆಯ ಮಟ್ಟ | ಬೇಕಾಗುವ ಸಮಯ |
|---|---|---|---|---|---|---|---|
| 1 | ವ್ಯಾಕರಣಾಂಶಗಳು | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 2 | ವ್ಯಾಕರಣಾಂಶಗಳು | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 3 | ವ್ಯಾಕರಣಾಂಶಗಳು | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ವಸ್ತುನಿಷ್ಠ | 1 | ಸುಲಭ | 2 ನಿಮಿಷಗಳು |
| 4 | ಶಬರಿ | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 5 | ಹಕ್ಕಿಹಾರುತಿದೆ ನೋಡಿದಿರಾ | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 6 | ಉದಾತ್ತ ಚಿಂತನೆಗಳು | ಜ್ಞಾನ / ಸ್ಮರಣೆ | ಸ್ಮರಿಸಿ ಉತ್ತರಿಸುತ್ತಾನೆ/ಳೆ | ಕಿರು ಉತ್ತರ 1 | 1 | ಸುಲಭ | 2 ನಿಮಿಷಗಳು |
| 7 | ಲಂಡನ್ ನಗರ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 8 | ಸಂಕಲ್ಪಗೀತ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 9 | ಶಬರಿ | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 10 | ವಾಕ್ಯ ರಚನೆ | ಅಭಿವ್ಯಕ್ತಿ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಕಠಿಣ | 9 ನಿಮಿಷಗಳು |
| 11 | ಲಂಡನ್ ನಗರ | ಅಭಿವ್ಯಕ್ತಿ | ವಿವರಿಸುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 12 | ಹಕ್ಕಿ ಹಾರುತಿದೆ ನೋಡಿದಿರಾ | ಗ್ರಹಿಕೆ | ಬರೆಯುತ್ತಾನೆ/ಳೆ | ಕಿರು ಉತ್ತರ 2 | 2 | ಸಾಧಾರಣ | 4 ನಿಮಿಷಗಳು |
| 13 | ಸಂಕಲ್ಪಗೀತೆ | ಪ್ರಶಂಸೆ | ವಿವರಿಸುತ್ತಾನೆ/ಳೆ | ಕಿರು ಉತ್ತರ 2 | 2 | ಕಠಿಣ | 9 ನಿಮಿಷಗಳು |
| | ಒಟ್ಟು | | | | 20 | | 50 + 10 ನಿಮಿಷಗಳು |